# ಸ್ಫೋಟಕ ಪದಾರ್ಥಗಳ ಅಧಿನಿಯಮ, 1908

(1908ರ ಅಧಿನಿಯಮ ಸಂಖ್ಯೆ 6)

**[27.8.2003 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 27ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 50 ರಿಂದ 51 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ
2. ಪರಿಭಾಷೆಗಳು
3. ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯ ತರುವ ಸಂಭವವಿರುವಂಥ ಸ್ಫೋಟವನ್ನುಂಟುಮಾಡಿದ್ದಕ್ಕೆ ದಂಡನೆ
4. ಸ್ಫೋಟವುಂಟುಮಾಡಲು ಪ್ರಯತ್ನಿಸಿದ್ದಕ್ಕೆ ಅಥವಾ ಪ್ರಾಣ ಅಥವಾ ಸ್ವತ್ತಿಗೆ ಅಪಾಯವುಂಟುಮಾಡುವ ಉದ್ದೇಶದಿಂದ ಸ್ಫೋಟಕ ಪದಾರ್ಥವನ್ನು ತಯಾರು ಮಾಡಿದ್ದಕ್ಕೆ ಅಥವಾ ಇಟ್ಟುಕೊಂಡಿದ್ದಕ್ಕೆ ದಂಡನೆ
5. ಸಂಶಯಾಸ್ಪದ ಸನ್ನಿವೇಶಗಳಲ್ಲಿ ಸ್ಫೋಟಕ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಅಥವಾ ಸ್ವಾಧೀನದಲ್ಲಿರಿಸಿಕೊಂಡಿರುವುದಕ್ಕೆ ದಂಡನೆ
6. ದುಷ್ಪ್ರೇರಕರಿಗೆ ದಂಡನೆ
7. ಅಪರಾಧಗಳ ಅಧಿವಿಚಾರಣೆಯ ಮೇಲೆ ನಿರ್ಬಂಧ

# ಸ್ಫೋಟಕ ಪದಾರ್ಥಗಳ ಅಧಿನಿಯಮ, 1908

(1908ರ ಅಧಿನಿಯಮ ಸಂಖ್ಯೆ 6)

[8ನೇ ಜೂನ್, 1908]

ಸ್ಫೋಟಕ ಪದಾರ್ಥಗಳಿಗೆ ಸಂಬಂಧಪಟ್ಟ ಕಾನೂನನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಸ್ಫೋಟಕ ಪದಾರ್ಥಗಳಿಗೆ ಸಂಬಂಧಪಟ್ಟ ಕಾನೂನನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವಾಗಿರುವುದರಿಂದ, ಇದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ.**- (1) ಈ ಅಧಿನಿಯಮವನ್ನು, ಸ್ಫೋಟಕ ಪದಾರ್ಥಗಳ ಅಧಿನಿಯಮ, 1908 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಭಾರತದ ನಾಗರಿಕರಿಗೂ ಸಹ ಅನ್ವಯಿಸುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ,

(ಎ) "ಸ್ಫೋಟಕ ಪದಾರ್ಥ" ಎಂಬ ಪದವು ಯಾವುದೇ ಸ್ಫೋಟಕ ಪದಾರ್ಥವನ್ನು ತಯಾರಿಸುವುದಕ್ಕಾಗಿ ಬಳಸಲಾಗುವ ಯಾವುವೇ ಸಾಮಗ್ರಿಗಳನ್ನು ಹಾಗೂ ಯಾವುದೇ ಸ್ಫೋಟಕ ಪದಾರ್ಥದಲ್ಲಿ ಅಥವಾ ಅದರ ಸಹಾಯದಿಂದ ಯಾವುದೇ ಸ್ಫೋಟವನ್ನು ಉಂಟುಮಾಡುವುದಕ್ಕಾಗಿ ಅಥವಾ ಉಂಟುಮಾಡಲು ಸಹಾಯ ಮಾಡುವುದಕ್ಕಾಗಿ ಬಳಸಲಾದ ಅಥವಾ ಬಳಸಲು ಉದ್ದೇಶಿಸಲಾದ ಅಥವಾ ಅಳವಡಿಸಲಾದ ಅಥವಾ ಯಾವುದೇ ಸಲಕರಣೆ, ಯಂತ್ರ, ಸಾಧನ ಸಾಮಗ್ರಿ ಹಾಗೂ ವಸ್ತುವನ್ನು ಮತ್ತು ಅಂಥ ಯಾವುದೇ ಸಲಕರಣೆಯ, ಯಂತ್ರದ ಅಥವಾ ಸಾಧನ ಸಾಮಗ್ರಿಯ ಯಾವುದೇ ಭಾಗವನ್ನು ಸಹ ಒಳಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು.

(ಬಿ) "ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥ" ಎಂಬ ಪದಾವಳಿಯು, ಸಂಶೋಧನಾ ಅಭಿವೃದ್ಧಿ ಸ್ಫೋಟಕ (ಆರ್‌ಡಿಎಕ್ಸ್), ಪೆಂಟಾ ಎರಿಥಿಟ್ರಲ್ ಟೆಟ್ರಾನೈಟ್ರೇಟ್ (ಪಿಇಟಿಎನ್), ಹೆಚ್ಚು ಕರಗುವ ಸ್ಫೋಟಕ (ಹೆಚ್‌ಎಂಎಕ್ಸ್), ಟ್ರೈನೈಟ್ರೋ ಟೊಲೂನ್ (ಟಿಎನ್‌ಟಿ), ಕಡಿಮೆ ತಾಪಮಾನದ ಪ್ಲಾಸ್ಟಿಕ್ ಸ್ಫೋಟಕ (ಎಲ್‌ಟಿಪಿಇ), ಸಂಯೋಜನಾ ಸ್ಫೋಟಕ (ಸಿಇ) (2,4,6 ಫಿನಾಯಿಲ್ ಮಿಥಿಕ್ ನೈಟ್ರಾಮೈನ್ ಅಥವಾ ಟೆಟ್ರಾಯಿಲ್), ಓಸಿಟಿಓಎಲ್ (ಹೆಚ್ಚು ಕರಗುವ ಸ್ಫೋಟಕದ ಮತ್ತು ಟ್ರೈನೈಟ್ರೋ ಟೊಲೂಯನ್‌ಗಳ ಮಿಶ್ರಣ) ಪ್ಲಾಸ್ಟಿಕ್ ಸ್ಫೋಟಕ ಕಿರ್ಕಿ 1 (ಪಿಇಕೆ 1) ಮತ್ತು ಆರ್‌ಡಿಎಕ್ಸ್/ ಟಿಎನ್‌ಟಿ ಸಂಯುಕ್ತಗಳು ಮತ್ತು ಅದೇ ಬಗೆಯ ಇತರ ಸ್ಫೋಟಕಗಳು ಮತ್ತು ಅದರ ಸಂಯೋಜನೆ ಮತ್ತು ಸ್ಫೋಟಕವನ್ನುಂಟುಮಾಡುವ ದೂರ ನಿಯಂತ್ರಣ ಸಾಧನಗಳು ಮತ್ತು ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಪದಾರ್ಥ ಮತ್ತು ಅದರ ಸಂಯೋಜನೆಯನ್ನು ಒಳಗೊಳ್ಳುತ್ತದೆ ಎಂಬುದಾಗಿ ಭಾವಿಸತಕ್ಕದ್ದು.

**3. ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯ ತರುವ ಸಂಭವವಿರುವಂಥ ಸ್ಫೋಟವನ್ನುಂಟುಮಾಡಿದ್ದಕ್ಕೆ ದಂಡನೆ.**- ಕಾನೂನುಬಾಹಿರವಾಗಿ ಮತ್ತು ದ್ವೇಷಪೂರ್ವಕವಾಗಿ ಯಾರೇ ವ್ಯಕ್ತಿಯು,

(ಎ) ಪ್ರಾಣಕ್ಕೆ ಅಪಾಯವನ್ನುಂಟು ಮಾಡುವ ಅಥವಾ ಸ್ವತ್ತಿಗೆ ಗಂಭೀರ ನಷ್ಟವುಂಟುಮಾಡುವ ಸಂಭವವಿರುವ ಯಾವುದೇ ಸ್ಫೋಟಕ ಪದಾರ್ಥದ ಮೂಲಕ ವಾಸ್ತವವಾಗಿ ವ್ಯಕ್ತಿಗೆ ಅಥವಾ ಸ್ವತ್ತಿಗೆ ಯಾವುದೇ ಹಾನಿ ಅಥವಾ ನಷ್ಟ ಉಂಟಾಗಿರಲಿ ಅಥವಾ ಉಂಟಾಗಿಲ್ಲದಿರಲಿ, ಸ್ಫೋಟವನ್ನುಂಟುಮಾಡಿದರೆ ಅವನು ಆಜೀವ ಕಾರಾವಾಸ ಅಥವಾ ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದಂಥ ಕಠಿಣ ಕಾರಾವಾಸ ಇವೆರಡರಲ್ಲಿ ಯಾವುದೇ ರೀತಿಯ ಶಿಕ್ಷೆಯಿಂದ ದಂಡಿತನಾಗತಕ್ಕದ್ದು, ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(ಬಿ) ಪ್ರಾಣ ಹಾನಿಯನ್ನುಂಟುಮಾಡುವ ಅಥವಾ ಸ್ವತ್ತಿಗೆ ಗಂಭೀರ ನಷ್ಟವುಂಟುಮಾಡುವ ಸಂಭವವಿರುವ ಯಾವುದೇ ವಿಶೇಷ ಸ್ಫೋಟಕ ಪದಾರ್ಥದ ಮೂಲಕ ವಾಸ್ತವವಾಗಿ ವ್ಯಕ್ತಿಗೆ ಅಥವಾ ಸ್ವತ್ತಿಗೆ ಯಾವುದೇ ಹಾನಿ ಅಥವಾ ನಷ್ಟ ಉಂಟಾಗಿರಲಿ ಅಥವಾ ಉಂಟಾಗಿಲ್ಲದಿರಲಿ, ಸ್ಫೋಟವನ್ನುಂಟು ಮಾಡಿದರೆ ಅವನು ಮರಣದಂಡನೆ, ಅಥವಾ ಆಜೀವ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**4. ಸ್ಫೋಟವುಂಟುಮಾಡಲು ಪ್ರಯತ್ನಿಸಿದ್ದಕ್ಕೆ ಅಥವಾ ಪ್ರಾಣ ಅಥವಾ ಸ್ವತ್ತಿಗೆ ಅಪಾಯವುಂಟುಮಾಡುವ ಉದ್ದೇಶದಿಂದ ಸ್ಫೋಟಕ ಪದಾರ್ಥವನ್ನು ತಯಾರು ಮಾಡಿದ್ದಕ್ಕೆ ಅಥವಾ ಇಟ್ಟುಕೊಂಡಿದ್ದಕ್ಕೆ ದಂಡನೆ.–** ಯಾರೇ ವ್ಯಕ್ತಿಯು, ಕಾನೂನುಬಾಹಿರವಾಗಿ ಮತ್ತು ದ್ವೇಷಪೂರ್ವಕವಾಗಿ,

(ಎ) ಪ್ರಾಣಕ್ಕೆ ಅಪಾಯ ಉಂಟುಮಾಡುವ ಅಥವಾ ಸ್ವತ್ತಿಗೆ ಗಂಭೀರ ಹಾನಿ ಉಂಟುಮಾಡುವ ಸಂಭವವಿರುವಂಥ ಸ್ವರೂಪದ ಸ್ಫೋಟವನ್ನು ಸ್ಫೋಟಕ ಪದಾರ್ಥದ ಮೂಲಕ ಅಥವಾ ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥದ ಮೂಲಕ ಸ್ಫೋಟವನ್ನು ಉಂಟುಮಾಡುವ ಉದ್ದೇಶದಿಂದ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಪ್ರಾಣಕ್ಕೆ ಅಪಾಯವನ್ನುಂಟು ಮಾಡುವ ಅಥವಾ ಸ್ವತ್ತಿಗೆ ಗಂಭೀರ ಹಾನಿ ಉಂಟುಮಾಡುವ ಆ ಸ್ಫೋಟಕ ಪದಾರ್ಥದ ಮೂಲಕ ಅಥವಾ ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥದ ಮೂಲಕ ಉಂಟುಮಾಡಲು ಒಳಸಂಚು ನಡೆಸಿದರೆ; ಅಥವಾ

(ಬಿ) ಭಾರತದಲ್ಲಿ ಪ್ರಾಣಕ್ಕೆ ಅಪಾಯವಾಗುವಂತೆ ಅಥವಾ ಸ್ವತ್ತಿಗೆ ಗಂಭೀರ ಸ್ವರೂಪದ ಹಾನಿಯುಂಟಾಗುವಂತೆ ಯಾವುದೇ ಸ್ಫೋಟಕ ಪದಾರ್ಥದ ಮೂಲಕ ಅಥವಾ ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥದ ಮೂಲಕ ಹಾನಿಯುಂಟುಮಾಡಬೇಕೆಂಬ ಉದ್ದೇಶದಿಂದ ಅಥವಾ ಆ ಮೂಲಕ ಯಾವುದೇ ಪ್ರಾಣಕ್ಕೆ ಅಪಾಯವುಂಟುಮಾಡಲು ಅಥವಾ ಸ್ವತ್ತಿಗೆ ಗಂಭೀರ ಸ್ವರೂಪದ ಹಾನಿ ಉಂಟುಮಾಡಲು ಯಾರೇ ಇತರ ವ್ಯಕ್ತಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಅಂಥ ಯಾವುದೇ ಸ್ಫೋಟಕ ವಸ್ತುವನ್ನು ಕಾನೂನು ಬಾಹಿರವಾಗಿ ಅಥವಾ ದ್ವೇಷಪೂರ್ವಕವಾಗಿ ತಯಾರಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ,

– ಯಾವುದೇ ಸ್ಫೋಟವು ಉಂಟಾಗಲಿ ಅಥವಾ ಉಂಟಾಗದೆ ಇರಲಿ ಮತ್ತು ಅದರಿಂದಾಗಿ ಯಾರೇ ವ್ಯಕ್ತಿಗೆ ಅಥವಾ ಸ್ವತ್ತಿಗೆ ವಾಸ್ತವವಾಗಿ ಯಾವುದೇ ಹಾನಿ ಉಂಟಾಗಿರಲಿ ಅಥವಾ ಇಲ್ಲದಿರಲಿ, ಅವನು,

(i) ಯಾವುದೇ ಸ್ಫೋಟಕ ಪದಾರ್ಥದ ಸಂದರ್ಭದಲ್ಲಿ, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ, ಇವೆರಡರಲ್ಲಿ ಯಾವುದಾದರೂ ಒಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ii) ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥದ ಸಂದರ್ಭದಲ್ಲಿ, ಆಜೀವ ಕಠಿಣ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

5. **ಸಂಶಯಾಸ್ಪದ ಸನ್ನಿವೇಶಗಳಲ್ಲಿ ಸ್ಫೋಟಕ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಅಥವಾ ಸ್ವಾಧೀನದಲ್ಲಿರಿಸಿಕೊಂಡಿರುವುದಕ್ಕೆ ದಂಡನೆ.**- ಯಾರೇ ವ್ಯಕ್ತಿಯು, ಯಾವುದೇ ಸ್ಫೋಟಕ ಪದಾರ್ಥವನ್ನು ಅಥವಾ ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥವನ್ನು ತಯಾರು ಮಾಡಿದ್ದರೆ ಅಥವಾ ತಿಳಿದೂ ತಿಳಿದೂ, ಅದನ್ನು ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ ಮತ್ತು ಅವನು ಕಾನೂನು ಸಮ್ಮತ ಉದ್ದೇಶಕ್ಕಾಗಿ ಅದನ್ನು ತಯಾರಿಸುತ್ತಿಲ್ಲ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿಲ್ಲವೆಂಬ ಬಗ್ಗೆ ಯುಕ್ತ ಸಂದೇಹಕ್ಕೆ ಎಡೆ ಮಾಡಿಕೊಡುವಂಥ ಸಂದರ್ಭದಲ್ಲಿದ್ದರೆ, ತಾನು ಅದನ್ನು ಕಾನೂನು ಸಮ್ಮತ ಉದ್ದೇಶಕ್ಕಾಗಿ ತಯಾರು ಮಾಡಿದ್ದೇನೆ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದೇನೆ ಎಂದು ಸಾಬೀತುಪಡಿಸಲು ಸಾಧ್ಯವಾಗದಿದ್ದರೆ, ಅವನು,

(ಎ) ಯಾವುದೇ ಸ್ಫೋಟಕ ಪದಾರ್ಥದ ಸಂದರ್ಭದಲ್ಲಿ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಯಾವುದೇ ವಿಶೇಷ ಪ್ರವರ್ಗದ ಸ್ಫೋಟಕ ಪದಾರ್ಥದ ಸಂದರ್ಭದಲ್ಲಿ, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

6. **ದುಷ್ಪ್ರೇರಕರಿಗೆ ದಂಡನೆ.**- ಯಾರೇ ವ್ಯಕ್ತಿಯು, ಹಣ ಪೂರೈಸುವ ಮೂಲಕ ಅಥವಾ ಹಣವನ್ನು ಯಾಚಿಸುವ ಮೂಲಕ, ಆವರಣವನ್ನು ಒದಗಿಸುವ ಮೂಲಕ, ಸಾಮಗ್ರಿಗಳನ್ನು ಸರಬರಾಜು ಮಾಡುವ ಮೂಲಕ, ಅಥವಾ ಯಾವುದೇ ರೀತಿಯಲ್ಲಿ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧ ಎಸಗುವುದಕ್ಕೆ ಸಲಹೆ ಮಾಡಿದರೆ, ಸಹಾಯ ಮಾಡಿದರೆ, ದುಷ್ಪ್ರೇರಿಸಿದರೆ ಅಥವಾ ಅದಕ್ಕೆ ಸಹಾಯಕನಾದರೆ, ಅಂಥ ವ್ಯಕ್ತಿಯು ಆ ಅಪರಾಧಕ್ಕಾಗಿ ಉಪಬಂಧಿಸಲಾದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

7. **ಅಪರಾಧಗಳ ಅಧಿವಿಚಾರಣೆಯ ಮೇಲೆ ನಿರ್ಬಂಧ.**- ಜಿಲ್ಲಾ ಮ್ಯಾಜಿಸ್ಟ್ರೇಟರ ಸಮ್ಮತಿಯಿಲ್ಲದೆ ಯಾವುದೇ ನ್ಯಾಯಾಲಯವೂ ಈ ಅಧಿನಿಯಮದ ವಿರುದ್ಧ ಅಪರಾಧವನ್ನು ಮಾಡಿದ ಯಾರೇ ವ್ಯಕ್ತಿಯ ಅಧಿವಿಚಾರಣೆಯನ್ನು ನಡೆಸಲು ಕ್ರಮ ಜರುಗಿಸತಕ್ಕದ್ದಲ್ಲ.

* * * * * *